ದಿನಾಂಕಃ 22.06.2026 ರಂದು ಪಿ.ಡಬ್ಲ್ಯೂ-2 ರವರನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

**ಪಾಟೀ ಸವಾಲುಃ ಪ್ರತಿವಾದಿ ಪರ ವಕೀಲರಿಂದಃ**

1. ದಾವೆ ಹೂಡಲು ಮಾಹಿತಿಯನ್ನು ಯಾರು ಕೊಟ್ಟಿರುತ್ತಾರೆ ಎಂದರೆ ನನ್ನ ತಾಯಿ 1ನೇ ವಾದಿ. ಈ ಹಿಂದೆ 1ನೇ ವಾದಿ ಅವರ ಮುಖ್ಯ ವಿಚಾರಣೆ ಸಲ್ಲಿಸಿ ಪ್ರಾ.ಸಾ.1 ವಿಚಾರಣೆಗೆ ಒಳಪಟ್ಟಿರುತ್ತಾರೆ ಎಂದರೆ ಸರಿ. ಈ ದಾವೆಯ ಬಗ್ಗೆ ನನಗೆ ಯಾವುದೇ ಮಾಹಿತಿ ಇರುವುದಿಲ್ಲ ಎಂದರೆ ಸರಿಯಲ್ಲ. ದಾವಾ ಸ್ವತ್ತು ಈಗ 1ನೇ ವಾದಿಯ ಹೆಸರಿನಲ್ಲಿರುತ್ತದೆಯೇ ಎಂದರೆ ಹೌದು. ದಾವಾ ಸ್ವತ್ತಿನಲ್ಲಿ ಮನೆ ನಿರ್ಮಿಸಿದಾಗ ಪರವಾನಗಿ ಪಡೆದುಕೊಂಡಿದ್ದೀರ ಎಂದರೆ ಪಡೆದುಕೊಂಡಿರುತ್ತೇನೆ. ನಿಪಿ 6 ಪರವಾನಗಿಯಲ್ಲಿ ಮುಖ್ಯ ರಸ್ತೆಯಿಂದ 40 ಅಡಿ ಅಂತರದಲ್ಲಿ ಮನೆ ನಿರ್ಮಿಸಬೇಕು ಎಂದು ನಮೂದಿಸಿದೆ ಎಂದರೆ ಸರಿ. ನಿಪಿ 6 ರಲ್ಲಿ ಒಟ್ಟು ವಿಸ್ತೀರ್ಣ 11*23 ರ ಅಡಿಯ ಪೈಕಿ ಪಕ್ಕದ ಮನೆಗೂ ಮತ್ತು ನಿರ್ಮಿಸಲಾಗುವ ಮನೆಗೂ 5 ಅಡಿ ಬಿಟ್ಟು ಮನೆ ಕಟ್ಟಬೇಕು ಎಂದು ನಮೂದಿರುತ್ತದೆ ಎಂದರೆ ಸರಿ ಸದರಿ 5 ಅಡಿಯನ್ನು ಬಿಟ್ಟಿರುತ್ತೇವೆ ಎಂದು ನುಡಿಯುತ್ತಾರೆ. ಈಗ ಹಾಲಿ ಮನೆಯ ವಿಸ್ತೀರ್ಣ ಎಷ್ಟು ಎಂದರೆ ಈಗ ಹೇಳಲಾಗುವುದಿಲ್ಲ. ಎಷ್ಟು ಚದರ ಅಡಿ ಮನೆ ನಿರ್ಮಿಸಿದ್ದೀರ ಎಂದರೆ ನೆನೆಪಿಲ್ಲ. ಸದರಿ 5 ಅಡಿ ಜಾಗವನ್ನು 11*23 ಅಡಿಯ ಒಳಗಡೆ ಬಿಟ್ಟಿಲ್ಲವೆಂದರೆ ನನ್ನ ಸ್ವಂತ ಖರ್ಚಿನಿಂದ ಸದರಿ ಹೆಚ್ಚುವರಿ ಕಟ್ಟಡವನ್ನು ತೆರವುಗೊಳಿಸಲು ಅಭ್ಯಂತರ ಇರುವುದಿಲ್ಲ ಎಂದರೆ ಸರಿ. ನಿಪಿ 6 ರ ಪ್ರಕಾರ ಕಟ್ಟಡ ನಿರ್ಮಿಸಲಾಗಿರುತ್ತದೆಯೇ ಎಂದು ತಿಳಿದುಕೊಳ್ಳಲು ನ್ಯಾಯಾಲಯದಿಂದ ಕಮಿಷನರ್ ನೇಮಿಸಿಕೊಳ್ಳಲು ತೊಂದರೆ ಇರುವುದಿಲ್ಲ ಎಂದರೆ ಸರಿ. ನಿಪಿ 6 ರಲ್ಲಿರುವ ಷರತ್ತುಗಳನ್ನು ಉಲ್ಲಂಘಿಸಿ ಮನೆ ಕಟ್ಟಿರುತ್ತೇವೆ ಎಂದರೆ ಸರಿಯಲ್ಲ. ಆದ ಕಾರಣ ಪರಿಹಾರ ಪಡೆಯಲು ಅರ್ಹರಲ್ಲ ಎಂದರೆ ಸರಿಯಲ್ಲ. ಸದರಿ ವಿಚಾರ 1ನೇ ವಾದಿಗೆ ತಿಳಿದಿರುವ ಕಾರಣ ಅವರನ್ನು ಮುಂದುವರೆದ ಪಾಟೀಸವಾಲಿಗೆ ಕರೆಸಿರುವುದಿಲ್ಲ ಎಂದರೆ ಸರಿಯಲ್ಲ.

ಮರುವಿಚಾರಣೆ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಿರುತ್ತೇನೆ.)

ಓದಿ ಹೇಳಿ ಕೇಳಿ ಸರಿ ಇದೆ ಎಂದು ಒಪ್ಪಿರುತ್ತಾರೆ.

(ಸ್ನೇಹ ಎಂ.)
ವ್ಯವಹಾರ ನ್ಯಾಯಾಧೀಶರು
ಮತ್ತು ಜೆ.ಎಂ.ಎಫ್.ಸಿ., ಆಲೂರು.